**ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 1 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.RB ರವರಿಂದಃ**

1) ಅಪಘಾತದ ಸಮಯದಲ್ಲಿ ನಾನು ಒಂದು ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದೆನು ಮತ್ತು ಆ ಕಾರನ್ನು ನನ್ನ ಗಂಡನು ಬಾಡಿಗೆಗೆ ಪಡೆದುಕೊಂಡಿದ್ದರು ಮತ್ತು ಆ ಕಾರಿನ ಮಾಲೀಕರ ಹೆಸರು ನನಗೆ ಗೊತ್ತಿರುವುದಿಲ್ಲ. ಅಪಘಾತವು ಮಧ್ಯರಾತ್ರಿ **1.30** ರ ಸಮಯದಲ್ಲಿ ಆಗಿದೆ. ಅಪಘಾತವು ಆದಂತಹ ಸಮಯದಲ್ಲಿ ನಾನು ಮತ್ತು ನನ್ನ ಗಂಡನು ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಸದರಿ ಕಾರಿನಲ್ಲಿ ಬರುತ್ತಿದ್ದೆವು. ಅಪಘಾತದ ಸಮಯದಲ್ಲಿ ನಾನು ಆ ಕಾರಿನ ಹಿಂಭಾಗದ ಆಸನದಲ್ಲಿ ಕುಳಿತ್ತಿದ್ದೆನು. ಆ ಕಾರಿನ ಚಾಲಕನ ಪಕ್ಕದ ಆಸನದಲ್ಲಿ ನನ್ನ ಗಂಡನು ಕುಳಿತ್ತಿದ್ದರು.

2) ಸದರಿ ಅಪಘಾತದಲ್ಲಿ ನನ್ನ ಗಂಡನ ತಲೆಗೆ ಗಾಯಗಳು ಆಗಿದ್ದವು.

3) ಅಪಘಾತವು ಆದಂತಹ ಸಮಯದಲ್ಲಿ ನಾನು ಎಚ್ಚರವಾಗಿಯೇ ಕುಳಿತಿದ್ದೆನು. ಅಪಘಾತವು ನೆಲಮಂಗಲದ ಟೋಲ್ ಗೇಟ್ ಬಳಿ ಆಗಿದೆ. ಅಪಘಾತವು ಆದಂತಹ ಸ್ಥಳದಿಂದ ಟೋಲ್ ಗೇಟ್ ಎಷ್ಟು ದೂರದಲ್ಲಿ ಇದೆ ಎಂದು

ಹೇಳಲು ಸಾಧ್ಯವಿಲ್ಲ.

4) ಯಾವ ಕಾರಿನಲ್ಲಿ ನಾನು ಪ್ರಯಾಣ ಮಾಡುತ್ತಿದ್ದೆನೋ ಆ ಕಾರಿನ ಮುಂಭಾಗದಲ್ಲಿ ಒಂದು ಲಾರಿಯು ಹೋಗುತ್ತಿತ್ತು ಮತ್ತು ಆ ಲಾರಿಯನ್ನು ಅದರ ಚಾಲಕನು ಏಕಾಏಕಿ ನಿಲ್ಲಿಸಿದ್ದಾರೆ ಮತ್ತು ಆ ಕಾರಣದಿಂದ ನಮ್ಮ ಕಾರಿನ ಚಾಲಕನು ಕಾರನ್ನು ನಿಯಂತ್ರಣ ಮಾಡಲು ಸಾಧ್ಯ ಆಗದೇ ಲಾರಿಯ ಹಿಂಭಾಗಕ್ಕೆ ಕಾರನ್ನು ಡಿಕ್ಕಿ ಹೊಡೆಸಿದನು ಎಂದರೆ ಸರಿ.

5) ಅಪಘಾತದ ನಂತರ ನನ್ನನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನನ್ನ ಜೊತೆಯಲ್ಲಿ ನನ್ನ ಗಂಡನೂ ಸಹಾ ಆಸ್ಪತ್ರೆಗೆ ಬಂದಿದ್ದರು. ಸದರಿ ಅಪಘಾತದಲ್ಲಿ ಸದರಿ ಕಾರಿನ ಚಾಲಕನಿಗೆ ಗಾಯಗಳು ಆಗಿದ್ದವೋ ಅಥವಾ ಇಲ್ಲವೋ ಎಂದು ನಾನು ಗಮನಿಸಲಿಲ್ಲ. ಸಾಕ್ಷಿಯು ಮುಂದುವರೆದು "ಅಪಘಾತದಲ್ಲಿ ನನಗೆ ವಿಪರೀತ ಗಾಯಗಳು ಆಗಿದ್ದ ಕಾರಣದಿಂದ ನಾನು ಬೇರೆ ಯಾವುದೇ ವಿಷಯಗಳನ್ನು ಗಮನಿಸುವ ಸ್ಥಿತಿಯಲ್ಲಿ ಇರಲಿಲ್ಲ" ಎಂದು ನುಡಿದಿದ್ದಾರೆ.

6) ಒಂದು ವೇಳೆ ಮೇಲೆ ಹೇಳಿದ ಲಾರಿಯ ಚಾಲಕನು ಲಾರಿಯನ್ನು ಏಕಾಏಕಿ ನಿಲ್ಲಿಸದೇ ಇದ್ದ ಪಕ್ಷದಲ್ಲಿ ಅಪಘಾತವು ಆಗುತ್ತಿರಲಿಲ್ಲ ಎಂದರೆ ಅದೆಲ್ಲಾ ನನಗೆ ಹೇಳಲು ಗೊತ್ತಾಗುವುದಿಲ್ಲ.

7) ಅಪಘಾತವು ಯಾವ ಕಾರಣದಿಂದ ಆಯಿತು ಎಂಬ ವಿಷಯವನ್ನು ಆಸ್ಪತ್ರೆಯಲ್ಲಿ ವೈದ್ಯರ ಬಳಿ ನಾನು ಹೇಳಿದ್ದೇನೆ.

8) ನಾನು ಮತ್ತು ನನ್ನ ಗಂಡನು ಆಸ್ಪತ್ರೆಯಲ್ಲಿ ಇದ್ದಾಗಲೇ ಪೋಲಿಸರಿಗೆ ದೂರನ್ನು ಕೊಡಲಾಗಿದೆ ಎಂದರೆ ಅದೆಲ್ಲಾ ನನಗೆ ಗೊತ್ತಿಲ್ಲ. ಅಪಘಾತಕ್ಕಿಂತ ಮೊದಲು ನನಗೆ ಏನು ಆರೋಗ್ಯದ ಸಮಸ್ಯೆಗಳು ಇದ್ದವು ಎಂದು ನಾನು ವೈದ್ಯರ ಬಳಿ ಹೇಳಿದ್ದೇನೆ.

9) ನನಗೆ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಮಾಡಿಲ್ಲ ಎಂದರೆ ಸರಿ.

10) ನೆಲಮಂಗಲದ ಆಸ್ಪತ್ರೆಯಿಂದ ನನ್ನನ್ನು ಬೆಂಗಳೂರಿನ ಇ.ಎಸ್.ಐ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಇ.ಎಸ್.ಐ ಆಸ್ಪತ್ರೆಯಲ್ಲಿ "ಇಲ್ಲಿ ಆಗುವುದಿಲ್ಲ" ಎಂದು ಹೇಳಿದರು, ಹಾಗಾಗಿ ನನ್ನನ್ನು ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಾನು **10** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿದ್ದೇನೆ. ಆ ಹತ್ತು ದಿನಗಳ ಅವಧಿಯಲ್ಲಿ ನನಗೆ ಕೇವಲ ಔಷಧಿ ಮತ್ತು ಮಾತ್ರೆಯನ್ನು ಕೊಡಲಾಗಿದೆ ಎಂದರೆ **scanning** ಪರೀಕ್ಷೆಯನ್ನೂ ಸಹಾ ಮಾಡಲಾಗಿದೆ.

11) ರೆಡಿಯಾಲೆಜಿ ರಿಪೋರ್ಟ್ ಅನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

12) **Wear Craft** ಎಂಬ ಕಂಪೆನಿಯಲ್ಲಿ ಒಟ್ಟು ಎಷ್ಟು ಜನರು ನೌಕರರು ಇದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ಸಂಸ್ಥೆಯಲ್ಲಿ **face identification biometric** ಮೂಲಕ ಹಾಜರಾತಿ ತೆಗೆದುಕೊಳ್ಳುತ್ತಾರೆ. ಒಂದು ದಿನಕ್ಕೆ ನಾನು ಎಷ್ಟು ಕೆಲಸ ಮಾಡುತ್ತೇನೆ ಅದರ ಆಧಾರದ ಮೇರೆಗೆ ನನಗೆ ಸಂಬಳ ಕೊಡುತ್ತಿದ್ದರು. ನಾನು ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೇನೆ ಎನ್ನು ವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

13) ನಾನು ನನ್ನ ಚಿಕಿತ್ಸೆಗಾಗಿ **4** ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಡಿಪಡಿಸಿಲ್ಲ ಎಂದರೆ ಈ ಪ್ರಶ್ನೆಗೆ ಈ ಸಾಕ್ಷಿದಾರರು ಮೌನವಾಗಿ ಕುಳಿತ್ತಿದ್ದಾರೆ.

14) ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ಬದಲಿಗೆ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ ಮತ್ತು ಆ ವಿಷಯವನ್ನು ಮುಚ್ಚಿಟ್ಟು ಲಾರಿಯ ಚಾಲಕನು ಕಾರಿನ

ಚಾಲಕನ ವಿರುದ್ಧ ಪೋಲಿಸರಿಗೆ ಸುಳ್ಳು ಫಿರ್ಯಾದು ಕೊಟ್ಟಿದ್ದಾನೆ ಮತ್ತು ನಾನು ನನ್ನ ಅನುಕೂಲಕ್ಕಾಗಿ ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ</u>**

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು 1 ನೇ ಎದುರುದಾರರ ಪರವಾಗಿ ಶ್ರೀ.ಆರ್.ಬಿ. ವಕೀಲರು ಮಾಡಿರುವಂತಹ ಪಾಟೀ ಸವಾಲನ್ನು ತಾವು ಸಹಾ ಅಳವಡಿಸಿಕೊಳ್ಳತ್ತೇವೆ ಎಂದು ನುಡಿದಿದ್ದಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.